– ಈ ಅದ್ಭುತವಾದ ದೃಶ್ಯಗಳ ಸರಣಿ ಕಲ್ಪನೆಯನ್ನು ಒದಗಿಸಬಲ್ಲದು ಎಂದು ಯೋಚಿಸಿದರೆ ಮೈ ಜುಂ ಎನ್ನಿಸುತ್ತದೆ. ಈ ಕಥೆಯನ್ನು ಕುರಿತು ಬಹಳ ಹಿಂದೆ ಗಿರೀಶ್ ಕಾರ್ನಾಡ್ 'Flowers' ಎಂಬ ನಾಟಕ ಬರೆದಿದ್ದಾರೆ. ಈ ನಾಟಕವನ್ನು ರಾಸ್ಟೆನ್ ಅಬೆಲ್ ಅವರು ಹದಿನೈದು ವರ್ಷದ ಹಿಂದೆ ಪೃಥ್ವಿ ಥಿಯೇಟರ್‌ಗೆ ನಿರ್ದೇಶಿಸಿದ ನೆನಪಿದೆ. ರಜತ್ ಕಪೂರ್ ಈ ನಾಟಕದ ಪ್ರಮುಖ ಪಾತ್ರಧಾರಿ. ಅದ್ಭುತವಾದ ದೃಶ್ಯ ಸಂಯೋಜನೆಯ ನಾಟಕವಿದು. ಕಾದಂಬರಿಯ ಆ ಭಾಗವನ್ನು ಓದುತ್ತಿದ್ದರೆ, ಚಿತ್ರದುರ್ಗದ ಈ ಕಥೆಯ ಚಿತ್ರಗಳು ಕಣ್ಣಮುಂದೆ ಕಟ್ಟಿದಂತಾಗುತ್ತದೆ. ಕಾರ್ನಾಡರ ಕಲ್ಪನಾ ಶಕ್ತಿ ಅಂಥದ್ದು.

## ಖಯಾಲಿ ಸದಾನಂದ ಬುವಾ ಪ್ರೀತಿಯ ಕಥನ

ಕಾದಂಬರಿಯಲ್ಲಿ ಗುರುವನ್ನು ಅರಸುವ ವೆಂಕಟಸುಬ್ಬಯ್ಯನವರ ಕಥೆಯನ್ನು ಅಯ್ಯರ್ ಸಶಕ್ತವಾಗಿ ತೋರಿಸಿದ್ದಾರೆ ಅದರಲ್ಲಿ ಯಾವುದೇ ಎರಡು ಮಾತಿಲ್ಲ. ಆದರೆ, ಆ ಭಾಗದಲ್ಲಿ ಬರುವ ಸದಾನಂದ ಬುವಾ ಅವರ ಕಥೆಯಲ್ಲೊಂದು ಕಥೆ ಬರುತ್ತದೆ, ಹಾದುಹೋದ ಹಾಗೆ. ವಿವರಣೆ ಇಲ್ಲ. ಸದಾನಂದ ಬುವಾ ಅವರ ಭ್ರಮಾತ್ಮಕ ಸ್ಥಿತಿಗೆ ಸಂಬಂಧಿಸಿದ್ದು ಅದು. ಸದಾನಂದ ಬುವಾ ಅವರು ಸಂಗೀತದ ಜೊತೆಗೆ ದ್ವೇಷ ಮತ್ತು ಪ್ರೀತಿಯ ಬಾಂಧವ್ಯ ಕುರಿತಾದಂಥದ್ದು. ವೆಂಕಟಸುಬ್ಬಯ್ಯನಿಗೆ ಸಿಕ್ಕ ಬೈರಾಗಿಯದೂ ವಿಚಿತ್ರ ಜೀವನ. ಆತ ಧಾರವಾಡದ ಕಡೆಯವನು ಅಂದರೆ, ಈಗ ನಾವು ವಿಭಾಗಿಸುವ ಉತ್ತರಾದಿ ಸಂಗೀತದ ಪರಂಪರೆಯಿಂದ ಬಂದವನೆಂದುಕೊಳ್ಳಬಹುದು. ಆ ಸೀಮೆಯಲ್ಲಿಯೇ ಆತ ಹೆಸರಾದ ಸಂಗೀತಗಾರನಾಗಿದ್ದನಂತೆ. ಎಲ್ಲಾದರೂ, ಆತನ ಸಂಗೀತ ನಡೆಯುತ್ತದೆಯೆಂದರೆ ಸುತ್ತಲ ಹತ್ತಾರು ಊರುಗಳ ಜನ ಸೇರುತ್ತಿದ್ದರಂತೆ. ಹಾಡುತ್ತಾ ಕುಳಿತುಬಿಟ್ಟರೆ ಮೂರು ದಿನವಾದರೂ ಸರಿಯೇ, ಆರು ದಿನವಾದರೂ ಸರಿಯೇ, ಇಡೀ ಕಛೇರಿಗೆ ಒಂದೇ ಒಂದು ರಾಗವಾದರೂ ಆಯಿತು. ಮನಸ್ಸು ಬಂದರೆ ಹಾಡಿದ. ಇಲ್ಲವೆಂದರೆ ವರ್ಷಾನುಗಟ್ಟಲೇ ಹಾಡುವುದೇ ಇಲ್ಲ. ಅಂಥ ಅಸಾಮಿ ಆತ. ಅವನ ಸಂಗೀತದ ಖ್ಯಾತಿ ಪೇಶ್ವೆಗಳ ಆಸ್ಥಾನದವರೆಗೂ ವ್ಯಾಪಿಸಿತ್ತಂತೆ. ಅವರು ಎಷ್ಟೋ ಬಾರಿ ಅವನನ್ನು ಆಸ್ಥಾನಕ್ಕೆ ಕರೆಸಿಕೊಳ್ಳುವ ಯತ್ನ ಮಾಡಿದರೂ, ಅದು ಸಫಲವಾಗಲಿಲ್ಲ. "ಹಾಡೋ ಹಕ್ಕಿಗೆ ಅರಮನೆ ಪಂಜರವೇಕೆ? ಅರಸರ ಅಂಕೆ, ದೆವ್ವದ ಭಯ ಇಲ್ಲದ ಕಾಡೇ ಸರಿ. ಹಿಮಾಲಯ ಚೆನ್ನಾಗಿದೆ ಅಂತ ಹಿತ್ತಲಲ್ಲಿ ಇಟ್ಟುಕೊಳ್ಳುತ್ತೀರಾ? ಅಲ್ಲೇ ಹೋಗಿ ನೋಡಬೇಕು. ನನ್ನ ಸಂಗೀತ ಕೇಳಬೇಕೆಂದರೆ ನಾನಿದ್ದಲ್ಲಿಗೆ ಬನ್ನಿ'' ಎಂದು ಹೇಳಿ ಕಳಿಸಿಬಿಟ್ಟದ್ದನಂತೆ. ಇದರಿಂದಾಗಿ ಎಷ್ಟೋ ಜನರಿಗೆ ಅತ ಮಹಾ ದುರಹಂಕಾರಿ ಅನ್ನಿಸಿತು. ಆದರೂ ವಾಸ್ತವವಾಗಿ ಮನುಷ್ಯ ಅಹಂಕಾರಿ ಕೂಡ ಅಲ್ಲ. ಎಳೆಯ ಮಗು ಬಂದು 'ಬುವಾ ಹಾಡ್ತೀರಾ? ಕೇಳಬೇಕು' ಎಂದರೆ ಅಲ್ಲೇ ಹಾಡುತ್ತಿದ್ದರಂತೆ ಈ ಬುವಾ. ಊರಲ್ಲಿ ಹೋಗುವಾಗ ಯಾರ ಮನೆಯಲ್ಲಾದರೂ, ಮಗು ಅಳುತ್ತಿದ್ದರೆ, ಈತ ಹಾಗೇ ಒಳಗೆ ಹೋಗಿ ಹಾಡುತ್ತಾ ಮಗುವಿನ ತೊಟ್ಟಿಲು ತೂಗುತ್ತಿದ್ದನಂತೆ. ಇದನ್ನೆಲ್ಲ ನೋಡಿ ಜನ ಅವನಿಗೆ ಖಯಾಲಿ ಬುವಾ ಎನ್ನುತ್ತಿದ್ದರಂತೆ. ಈ ಸದಾನಂದ ಬುವಾನಿಗೆ ಸಂಗೀತದ ಮೇಲೆ ಇದ್ದಷ್ಟು ಪ್ರೀತಿ ಹೆಂಡತಿಯ ಮೇಲಿತ್ತು. ಆಕೆ ಅಪರೂಪದ ಸುಂದರಿ. ಇಂಥ ಖಯಾಲಿ ಬುವಾನನ್ನು ಕಟ್ಟಿಕೊಂಡು ಎಷ್ಟು ಕಷ್ಟಪಟ್ಟಳೋ ಏನೋ! ಮನಸ್ಸು ಎಷ್ಟು ರೋಸಿತ್ತೋ? ಬುವಾಗೆ ಒಳ್ಳೆ ಸಂಗೀತಗಾರನೆಂದು ಹೆಸರಿತ್ತು. ಹೆಂಡತಿಯ ಮೇಲೆ ಪ್ರೀತಿ ಇತ್ತು. ಆದರೆ ಅದೆಲ್ಲ ಹೊಟ್ಟೆಗೆ ಅನ್ನವೇ? ಮೈಗೆ ಬಟ್ಟೆಯೇ? ಏನಾಯಿತೋ ಏನೋ, ಒಂದು ದಿನ ಆಕೆ ಈತನನ್ನು ಬಿಟ್ಟು ಯಾರೋ ಬೇಕಾದವರೊಂದಿಗೆ ಓಡಿ ಹೋದಳು. ಅದು ಬುವಾಗೆ ಸಿಡಿಲಿನ ಏಟಾಯಿತು.

ಪ್ರೀತಿಯ ಮತ್ತೊಂದು ಮಗ್ಗಲು ಮತ್ತು ಸಾಮಾಜಿಕ ಪರಿಸ್ಥಿತಿಯಲ್ಲಿ ಹುಚ್ಚರಿಗೇನು ಬೆಲೆ ಎಂಬ ಪ್ರಶ್ನೆಗೆ ಇದಕ್ಕಿಂತ ಉತ್ತಮ ಕಥೆ ಮತ್ತು ದೃಶ್ಯ ಸಂಗೀತ ಸಿಗಲು ಸಾಧ್ಯವೇ ಇಲ್ಲ ಎನ್ನುವುದು ನನ್ನ ಭಾವನೆ.

## ವೇದಬ್ರಹ್ಮ-ನಾದಬ್ರಹ್ಮನ ಮಿಳಿತವಾದ ಓಂಕಾರ ನಾದ

'ನನಗೆ ಸಂಗೀತ ಕಲಿಸು' ಎಂದು ಸದಾನಂದ